ಆ) ಕೆಲವು ಅಲ್ಪಾವಧಿ ಹಾಗೂ ದೀರ್ಘಾವಧಿ ಯೋಜನೆಗಳನ್ನು ಒಳಗೊಂಡ ನೇಕಾರರ ಪ್ಯಾಕೇಜ್ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಇ) ನೇಕಾರರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹಾಗೂ ಅವರ ತಾಂತ್ರಿಕ ಹಾಗೂ ಕುಶಲತೆಯನ್ನು ಮೇಲ್ದರ್ಜೆಗೇರಿಸಿ ನಿರಂತರವಾಗಿ ಅವರ ಆರ್ಥಿಕ ಉತ್ಪನ್ನವನ್ನು ಹೆಚ್ಚಿಸಿದ್ದು ಅವುಗಳನ್ನು 2 ರಿಂದ 5 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.

ಈ) ಇದರಿಂದಾಗಿ ಆ ಎರಡೂ ವರ್ಗಗಳ ನೇಕಾರರಿಗೆ ಅನುಕೂಲವಾಗುವುದು

ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ನಿಯಮ ಮೀರಿ ಹಣ ತೆಗೆದುಕೊಳ್ಳುತ್ತಿರುವುದು

250 (247): ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶು ಆಸ್ಪತ್ರೆಗಳಲ್ಲಿ ಇತ್ತೀಚಿಗೆ ರಾಸುಗಳಿಗೆ ಹಣ ವಸೂಲಿ ಮಾಡುತ್ತಿರುವುದು ನಿಜವೇ;

ಆ) ಮೂಕ ಪ್ರಾಣಿಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ಸೌಲಭ್ಯ ಸಿಗದೇ ವಾಪಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರೈತರಿಗೆ ಆಸ್ಪತ್ರೆಗಳಲ್ಲಿ ಔಷಧ ಕೊಡದೇ ಅಂಗಡಿಗಳಲ್ಲಿ ಕೊಳ್ಳಲು ಆದೇಶ ಮಾಡಲಾಗುತ್ತದೆಯೇ;

ಈ) ಹಾಗಿದ್ದಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಎಷ್ಟೆಷ್ಟು ಔಷಧ ಒದಗಿಸಲಾಗುತ್ತಿವೆ; ವಿವರ ನೀಡುವುದು?

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಸರ್ಕಾರಿ ಆದೇಶ ಸಂ:ಪಸಂಮೀ/57/ ಪಪಾಯೋ/2003, ಬೆಂಗಳೂರು, ದಿನಂಕ:21-7-2003ರಂತೆ ಹಿಂದೆ ವಿಧಿಸಿದ ಸೇವಾ ಶುಲ್ಕವನ್ನು ಸದ್ಯಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ.

ಆ) ಬಂದಿಲ್ಲ.

ಇ) ಇಲ್ಲ.

ಈ) ಜಾನುವಾರು ಸಂಖ್ಯೆಗೆ ಅನುಗುಣವಾಗಿ ಹಾಗೂ ವಂಟನ ಲಭ್ಯತೆ ಅನುಸಾರ ಜಿಲ್ಲಾವಾರು ಔಷಧಿಯನ್ನು ಸರಬರಾಜು ಮಾಡಲಾಗುತ್ತಿದ್ದು ಎಲ್ಲಾ ಉಪನಿರ್ದೇಶಕರು ಆಯಾ ಜಿಲ್ಲೆಯ ಅಧೀನ ಸಂಸ್ಥೆಗಳಿಗೆ ಮಾರ್ಗಸೂಚಿಯಂತೆ ಔಷಧಿಗಳನ್ನು ಮರುವಿತರಣೆ ಮಾಡುತ್ತಿದ್ದಾರೆ.

ಕೊಳ್ಳೇಗಾಲ ತಾಲ್ಲೂಕು ಕುಂತೂರಿನಲ್ಲಿರುವ ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ

251 (7): ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ಕುಂತೂರಿನಲ್ಲಿರುವ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಯಾರ ಒಡೆತನದಲ್ಲಿದೆ; ಇದು ಮುಚ್ಚಿ ಎಷ್ಟು ತಿಂಗಳಾಗಿದೆ;

ಆ) ಈ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುತ್ತಿರುವ ರೈತರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ?

ಇ) ರೈತರು ನೀಡಿದ ಕಬ್ಬಿಗೆ ಹಣದ ಬಾಕಿ ಹಾಗೂ ಕಾರ್ಮಿಕರಿಗೆ ನೀಡಬೇಕಾಗಿದ್ದ ವೇತನದ ಬಾಕಿ ನೀಡಲಾಗಿದೆಯೇ;

ಈ) ಕಾರ್ಖಾನೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆಯೆ, ಹಾಗಿದ್ದರೆ ಈವರೆಗೆ ನಡೆಸಿರುವ ಪ್ರಯತ್ನಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ ಡಿಎಸ್ ಕೆ: ಎಲ್‌ಕ್ಯೂಡಿ: 398:85–86, ದಿನಾಂಕ: 15–8–1986 ರ ರೀತ್ಯಾ ಸರ್ಕಾರದಿಂದ ನೇಮಿಸಲ್ಪಟ್ಟ ಸಮಾಪನಾಧಿಕಾರಿಗಳು ದಿನಾಂಕ: 27–11–1986 ರ ಕ್ರಯ ಪತ್ರದಂತೆ ಖೋಡೆ ಡಿಸ್ಟಿಲರೀಸ್ ಲಿ. ರವರಿಗೆ ವರ್ಗಾವಣೆಯಾಗಿರುತ್ತದೆ ಆದರೆ, ಈ ಪ್ರಕರಣವು ದಸ್ತಾವೇಜು ಅಪಮೌಲ್ಯವಾಗಿರುವುದರಿಂದ ಹಾಗೂ ಕೊನೆಯ ಕಂತನ್ನು ನೀಡದೆ ಇರುವುದರಿಂದ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಕಾರ್ಖಾನೆಯನ್ನು ದಿನಾಂಕ: 6–5–2001 ರಂದು ಮುಚ್ಚಲಾಗಿರುತ್ತದೆ. ಅಂದರೆ 31 ತಿಂಗಳಿನಿಂದ ಮುಚ್ಚಲಾಗಿರುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಸಿಐ 187ಎಸ್‌ಜಿಎಫ್ 2003 ದಿನಾಂಕ: 22–10–2003 ರ ರೀತ್ಯ ಈ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೆಳೆಗಾರರು ಬೆಳೆಯಲಾದ ಕಬ್ಬನ್ನು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಅಳಗಂಚಿ ಗ್ರಾಮದಲ್ಲಿರುವ ಬನ್ನಾರಿ ಅಮ್ಮನ್ ಶುಗರ್ಸ್ ಕಂಪೆನಿಗೆ ಸರಬರಾಜು ಮಾಡುವಂತೆ ಹಂಚಿಕೆ ಮಾಡಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಇ) ರೈತರಿಗೆ ಪಾವತಿಸಬೇಕಾದ ಕಬ್ಬು ಬಿಲ್ಲು ಬಾಕಿಯು ಬಡ್ಡಿಯೊಂದಿಗೆ ಪೂರ್ಣವಾಗಿ ಪಾವತಿಯಾಗಿದೆ. ನೌಕರರಿಗೆ ಪೂರ್ಣಪ್ರಮಾಣದಲ್ಲಿ ವೇತನ ಮತ್ತು ಇತರೇ ಭತ್ಯೆಗಳನ್ನು ಬಿಡುಗಡೆ ಮಾಡಲಾಗಿಲ್ಲ ನವೆಂಬರ್ 2001 ರಿಂದ ಜೂನ್ 20–02 ರವೆಗೆ ನೌಕರರ ವೇತನ 1,75,72,162.00 ರೂ.ಗಳು ಬಾಕಿ ಇದೆ. ಈ ಸಂಬಂಧ ಬಾಂಬೆ ಉಚ್ಚ ನ್ಯಾಯಾಲಯದ ದಾವೆ ಸಂಖ್ಯೆ 1569:2002 ರಲ್ಲಿ ದಾಖಲಾಗಿದ್ದು ನೌಕರರಿಗೆ ಪಾವತಿಸಲು ಬಾಕಿ ಇರುವ ಸುಮಾರು 1.75 ಕೋಟಿ ರೂ.ಗಳನ್ನು ಕಾರ್ಖಾನೆಯಿಂದ ವಸೂಲಿ ಮಾಡಲು ಉಪ ಆಯುಕ್ತರು ಕಾರ್ಮಿಕ ಇಲಾಖೆರವರು ವಸೂಲಾತಿ ದೃಢೀಕರಣ ಪತ್ರ ನೀಡಿದ್ದರೂ ಸಹ ಬಾಂಬೆ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ. ಈ ತಡೆಯಾಜ್ಞೆ ತೆರವುಗೊಳಿಸಲು ಹಾಗೂ ಮುಂದೆ ಪ್ರಕರಣವನ್ನು ನಡೆಸಲು ಸರ್ಕಾರಿ ವಕೀಲರನ್ನು ನೇಮಕ ಮಾಡಲಾಗಿದೆ.

ಈ) ಸದ್ಯದಲ್ಲಿ ಕಾರ್ಖಾನೆಯು ಖಾಸಗಿ ಕಾರ್ಖಾನೆಯಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರಾವಳಿ ತಾಲ್ಲೂಕುಗಳಲ್ಲಿ ಮುರಾರ್ಜಿ ದೇಸಾಯಿ ಅಥವಾ ಯಾವುದೇ ಶಾಲೆ ಸ್ಥಾಪನೆ

252 (278): ಶ್ರೀ ಮೋಹನ್ ಕೆ. ಶೆಟ್ಟಿ (ಕುಮುಟ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಅಥವಾ ಯಾವುದೇ ವಸತಿ ಶಾಲೆಗಳಿಲ್ಲದ ಕಾರಣ ಈ ಭಾಗದ ಹಿಂದುಳಿದ ಪರಿಶಿಷ್ಟ ಜಾತಿಯ, ಅಲ್ಪಸಂಖ್ಯಾತರ ಮಕ್ಕಳಿಗೆ ಶೈಕ್ಷಣಿಕ ಅಭಿವೃದ್ಧಿ ಬಗ್ಗೆ ಹಿನ್ನಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: